**SC No. 216/2022**
**PW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂ: **216/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಶೋಕ ಪಾಟೀಲ | ಪ್ರಾಸಾ: 1 |
| ತಂದೆಯ ಹೆಸರು | : | ಕೇದಾರಿ ಪಾಟೀಲ | ಚಾಸಾ: 1 |
| ಪ್ರಾಯ | : | 73 ವರ್ಷ | ದಿನಾಂಕ 06.01.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ನೌಕರ | |
| ವಾಸಸ್ಥಳ | : | ಗೌಂಡವಾಡ, ಬೆಳಗಾವಿ. | |

**ಮುಖ್ಯವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-4 ನನ್ನ ಮಗ. ಚಾಸಾ-5 ನನ್ನ ಹೆಂಡತಿ. ನನಗೆ ಚಾಸಾ-6 ರಿಂದ ಚಾಸಾ-9 ರವರ ಪರಿಚಯ ಇದೆ. ನನಗೆ ಆರೋಪಿತರು ಗೊತ್ತು.

2. ನನಗೆ ಸೇರಿದ ಜಮೀನು ಗೌಂಡವಾಡ ಊರ ಪಕ್ಕದಲ್ಲಿಯೇ ಇದೆ. ದಿನಾಂಕ 06.06.2021 ರಂದು ಸಂಜೆ 05.00 ಗಂಟೆಗೆ ನಾನು ನನ್ನ ಹೊಲದಲ್ಲಿ ಇದ್ದಾಗ ಅಲ್ಲಿ ನನ್ನ ಮಗ ಚಾಸಾ-4, ನನ್ನ ಹೆಂಡತಿ ಚಾಸಾ-5 ಮತ್ತು ಚಾಸಾ-6 ಮತ್ತು ಚಾಸಾ-7 ಕೂಡಾ ಅಲ್ಲಿದ್ದರು. ನಾವು ನಮ್ಮ ಹೊಲದಲ್ಲಿ ಬಿತ್ತನೆ ಮಾಡುವ ಸಲುವಾಗಿ ನೋಡಲು ಬಂದಿದ್ದೆವು.

ಆಗ ಈಗ ನ್ಯಾಯಾಲಯದ ಮುಂದೆ ಇರುವ ಎಲ್ಲಾ ಆರೋಪಿತರು ಅಲ್ಲಿಗೆ ಬಂದಿದ್ದರು. ಅವರು ನಮಗೆ ಬೈಯಲು ಪ್ರಾರಂಭಿಸಿದರು. ಆರೋಪಿತರು ಆ ಜಮೀನು ಅವರಿಗೆ ಸೇರಿದ್ದು ಮತ್ತು ಅದನ್ನು ಅವರಿಗೆ ಬಿಟ್ಟುಕೊಡಬೇಕು ಕೇಳಿದರು. ಆ ಬಳಿಕ ಆರೋಪಿತರು ನಮಗೆ ಹೊಡೆಯಲು ಪ್ರಾರಂಭಿಸಿದರು.

3. 1 ನೇ ಆರೋಪಿಯು ನನಗೆ ಕಲ್ಲಿನಿಂದ ಹೊಡೆದನು. 2 ನೇ ಆರೋಪಿಯು ಚಾಸಾ-4 ರವರಿಗೆ ಕಲ್ಲಿನಿಂದ ಹೊಡೆದನು. 3 ನೇ ಆರೋಪಿಯು ಚಾಸಾ-6 ರವರಿಗೆ ಕಲ್ಲಿನಿಂದ ಹೊಡೆದನು. 4 ನೇ ಆರೋಪಿಯು ಚಾಸಾ-7 ರವರಿಗೆ ಕಲ್ಲಿನಿಂದ ಹೊಡೆದನು. 5 ನೇ ಆರೋಪಿಯು ನಮಗೇಲ್ಲರಿಗೂ ಕೈಗಳಿಂದ ಗುದ್ದಿದನು. ಉಳಿದ ಆರೋಪಿತರು ಕೂಡಾ ನಮಗೆ ಕೈಯಿಂದ ಗುದ್ದಿ ಹೊಡೆದಿದ್ದರು.

4. ಆ ಬಳಿಕ ಆರೋಪಿತರೇಲ್ಲರೂ ನಮ್ಮ ಗಿರಣಿಯ ಬಳಿ ಬಂದರು. ಆರೋಪಿತರು ಆ ಗಿರಣಿಯ ಬಳಿ ಇದ್ದಂತಹ ಬಾಕ್ಸರ್ ಬೈಕಗೆ ಬೆಂಕಿ ಹಚ್ಚಿದರು ಮತ್ತು ನಮ್ಮ ಗಿರಣಿಗೆ ಕಲ್ಲು ತೂರಿ ನಷ್ಟ ಉಂಟು ಮಾಡಿದರು. ಆ ಬಳಿಕ ಈ ಎಲ್ಲಾ ಆರೋಪಿತರು ನಮ್ಮ ಮನೆಯ ಬಳಿ ಬಂದರು. ಆರೋಪಿತರು ನಮ್ಮ ಮನೆಯ ಬಾಗಿಲು, ಹಂಚು ಮತ್ತು ಕಿಟಕಿಗಳನ್ನು ಒಡೆದು ಹಾಕಿದರು. ಆ ಬಳಿಕ ಆರೋಪಿತರು ನನ್ನ ತಮ್ಮ ಚಾಸಾ-9 ರವರ ಮನೆಯ ಬಳಿ ಹೋಗಿದ್ದರು. ಆರೋಪಿತರು ಚಾಸಾ-9 ರವರ ಮನೆಗೆ ಕಲ್ಲು ಹೊಡೆದು ಮನೆಯ ಬಾಗಿಲು, ಕಿಟಕಿಗಳನ್ನು ಒಡೆದು ಹಾಕಿದರು. ಆ ಮನೆಯ ಮುಂದೆ ಇದ್ದಂತಹ ಎರಡು ಮೋಟಾರ ಬೈಕಗಳಿಗೆ ಆರೋಪಿತರು ಕಲ್ಲಿನಿಂದ ಹೊಡೆದು ಜಕಂ ಮಾಡಿದರು.

5. ಆ ಬಳಿಕ ಆರೋಪಿತರು ಚಾಸಾ-8 ರವರು ಮನೆಯ ಬಳಿ ಹೋಗಿ ಮನೆಗೆ ಕಲ್ಲು ಹೊಡೆದು, ಬಾಗಿಲು ಮತ್ತು ಕಿಟಕಿ ಮತ್ತು ಟಿವಿಯನ್ನು ಒಡೆದು ಹಾಕಿದರು. ಚಾಸಾ-8 ರವರ ಮನೆಯ ಮುಂದೆ ಇದ್ದಂತಹ ಎರಡು ಬೈಕಗಳ ಪೈಕಿ ಒಂದನ್ನು ಸುಟ್ಟು ಹಾಕಿದರು

ಮತ್ತು ಇನ್ನೊಂದಕ್ಕೆ ಕಲ್ಲು ಹೊಡೆದು ಡ್ಯಾಮೇಜ್ ಮಾಡಿದರು. ಆ ಬಳಿಕ ನಾನು ಪೋಲಿಸ ಠಾಣೆಗೆ ಹೋಗಿ ಈ ಬಗ್ಗೆ ಒಂದು ಪಿರ್ಯಾದಿಯನ್ನು ಕೊಟ್ಟಿದ್ದೆನು. ಆ ಪಿರ್ಯಾದಿಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಗುರುತಿಸಲಾಯಿತು.

6. ಈ ಘಟನೆಯ ಮಾರನೆಯ ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರು. ಪೋಲಿಸರು ನಮ್ಮ ಹೊಲಕ್ಕೆ ಬಂದು ಅಲ್ಲಿ ಪಂಚನಾಮೆ ಮಾಡಿದರು. ಅಲ್ಲಿಂದ ಪೋಲಿಸರು ನಮ್ಮ ಗಿರಣಿಗೆ ಬಂದಿದ್ದರು. ಅಲ್ಲಿ ಲುಕ್ಷಾಣು ಆಗಿರುವುದನ್ನು ನೋಡಿ ಪಂಚನಾಮೆ ಮಾಡಿದರು. ನಾನು ಪೋಲಿಸರಿಗೆ ಆರೋಪಿತರು ಡ್ಯಾಮೆಜ್ ಮಾಡಿದ ಮೋಟಾರ ಬೈಕಗಳನ್ನು ತೋರಿಸಿದೆನು. ಆ ಬಳಿಕ ಪೋಲಿಸರು ನಮ್ಮ ಮನೆಗೆ ಬಂದಿದ್ದರು ಮತ್ತು ಅಲ್ಲಿ ಡ್ಯಾಮೇಜ್ ಆಗಿರುವುದನ್ನು ನೋಡಿ ಪಂಚನಾಮೆ ಮಾಡಿದರು.

7. ಆನಂತರ ಪೋಲಿಸರು ಚಾಸಾ-9 ರವರ ಮನೆಯ ಬಳಿ ಹೋಗಿ ಅಲ್ಲಿ ಡ್ಯಾಮೇಜ್ ಆಗಿರುವುದನ್ನು ನೋಡಿ ಪಂಚನಾಮೆ ಮಾಡಿದರು. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಕಲ್ಲನ್ನು ನೋಡಿದರೇ ನಾನು ಗುರುತಿಸುತ್ತೇನೆ.

(ಈ ಸಂದರ್ಭದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೇಳುತ್ತಾರೆ. ಸಮಯ ನೀಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.